## ಇಲ್ಲಿಯವರೆಗೆ



ಮನುಷ್ಯನ ಅಭಿವೃದ್ಧಿ ಮೀಮಾಂಸೆಯ ಕುರುಡು ಓಟದ ಕೊಡಲಿ ಮಹಾವೃಕ್ಷವನ್ನು ಗುರಿಯಾಗಿಸಿಕೊಂಡಿದೆ. ಹಿಟಾಚಿಯ ಆಕ್ಟೋಪಸ್ ತೆಕ್ಕೆಯ ನೆರಳು ವೃಕ್ಷದತ್ತ ಚಾಚಿಕೊಂಡಿದೆ. ಮಹಾವೃಕ್ಷಕ್ಕೆ ಶತಮಾನಗಳಷ್ಟು ಹಿಂದಿನ ನೆನಪುಗಳು ಕಣ್ಣಮುಂದೆ ಬರುತ್ತಿವೆ. ದಟ್ಟಾರಣ್ಯದಲ್ಲಿ ಕಣ್ಣುಬಿಟ್ಟ ಬೀಜವೊಂದು, ನಿಧಾನವಾಗಿ ಚಿಗುರಾಗಿ, ಗಿಡವಾಗಿ ಕನಸುಗಳನ್ನು ಕಾಣುತ್ತಿದೆ. ಬದುಕು ಎಷ್ಟೊಂದು ಸುಂದರ ಎಂದುಕೊಳ್ಳುತ್ತಿರುವಾಗ ಆನೆಯೊಂದರ ಹುಚ್ಚಾಟವನ್ನು ಕಂಡು ಗಿಡ ಬೆಚ್ಚಿಬೀಳುತ್ತದೆ. ನಾಡಿನ ಜನ ಕಾಡಿಗೆ ಬಂದು ಖೆಡ್ಡಾ ಹಾಕಿ ಆನೆಗಳನ್ನು ಹಿಡಿಯುತ್ತಾರೆ. ಪ್ರಕೃತಿಯ ಸೌಂದರ್ಯ, ಇನ್ನೊಂದೆಡೆ ಮನುಷ್ಯಪ್ರಕೃತಿಯ ಕ್ರೌರ್ಯ – ಎರಡೂ ಪ್ರಕೃತಿಯ ಕಣ್ಣುಗಳಿಗೆ ದಕ್ಕುತ್ತದೆ.

ಹಾರಿ ಬಚಾವಾದವು. ಆದರೆ ಅದರ ಗೂಡು, ಮೊಟ್ಟೆ, ಮರಿಗಳು ಪತರುಗುಟ್ಟಿಹೋದವು. ಕೆಲವು ಕಡೆಯಂತೂ ಬೆಂಕಿಯು ಇಲಿಯ ಬಿಲಗಳೊಳಗೂ, ಹಾವಿನ ಹುತ್ತದೊಳಕ್ಕೂ ಇಳಿದು ಅದರೊಳಗೆ ಹೊಗೆಯನ್ನು ತೂರಿ ಅವೆಲ್ಲ ಉಸಿರುಗಟ್ಟಿ ಸಾಯುವಂತೆ ಮಾಡಿತು. ಅದು ಬೇರುಗಳ ಮೂಲಕ ಒಣಗಿದ್ದ ಮರಗಳಿಗೆ ಹರಿದು, ಅಲ್ಲಿಂದಲೇ ಹುರಿದು ತಿನ್ನಲು ಪ್ರಯತ್ನಿಸುತ್ತಿತ್ತು. ಹಾವು, ಹಲ್ಲಿ, ಹಾವ್ರಾಣಿ, ಅಳಿಲು, ಇಲಿ, ಉಡ, ಚೇಳು, ಓತಿಕ್ಯಾತ ಮೊದಲಾದ ಸಕಲೆಂಟು ನೆಲಗ್ರಾಹಿ ಜಂತುಗಳೂ ಜೀವಂತ ಕರಕಲಾಗಿ ನಿಗಿತುಕೊಂಡವು. ಭೂಮಿಯ ಮೇಲ್ಪದರದಲ್ಲಿದ್ದ ಸೂಕ್ಷ್ಮಾಣು ಜೀವಿಗಳು ಹಂಗಂಗೇ ಕಣ್ಣಿಗೆ ಕಾಣದಂತೆ ನಿರ್ನಾಮವಾದವು. ಇದರಿಂದಾಗಿ ಸಾವಯವ ಗೊಬ್ಬರ ಉತ್ಪಾದಿಸುತ್ತಿದ್ದ ಅವುಗಳ ಅನುಪಸ್ಥಿತಿಯಿಂದಾಗಿ ಬೇರುಗಳಿಗೆ ಇನ್ನು ಆರೇಳು ವರ್ಷ ಸತ್ವಯುತ ಆಹಾರ ಸಿಗದೇ ನರಳಬೇಕಾಗಬಹುದೆಂದು ಆಗ ತಿಳಿದಿರಲಿಲ್ಲ!

ಹಾಗೆಯೇ ಧಾವಿಸಿ ನನ್ನೆಡೆಗೆ ಬಂದ ಜ್ವಾಲೆಗಳು ಮೊದಮೊದಲು ನನ್ನ ಉದುರಿದ ಎಲೆಗಳಿಗೆ ತಗಲಿ ಒಂದು ಸಣ್ಣ ಸಂಚಲನವನ್ನು ಉಂಟುಮಾಡಿದವು. ಅದರ ಕಾವು ನನ್ನ ಬುಡಕ್ಕೇ ತಾಗಿದರೂ ಮೊದಮೊದಲು ಏನೋ ಬೆಚ್ಚಗಿನ ಅನುಭವವಾದಂತಾಯಿತು. ಆವರೆಗೆ ನನಗೆ ಬೆಂಕಿಯ ಸ್ಪರ್ಶದ ಅನುಭವವೇ ಇರಲಿಲ್ಲ. ಆದರೆ ಯಾವಾಗ ಅದು ಅಕ್ಕಪಕ್ಕದ, ಸುತ್ತಮುತ್ತಲ ಮೆಳೆಗಳಿಗೆ ಆವರಿಸಿತೋ ಆಗ ಅದರ ಬಿಸುಪು ನನ್ನ ರೆಂಬೆಗಳಿಗೂ ತಾಕಲಾರಂಭಿಸಿತು. ನನಗಿನ್ನೂ ಅಲ್ಲಿ ನಿಲ್ಲುವುದು ಸಾಧ್ಯವಾಗಲಿಲ್ಲ. ಬಲವಾದ ನನ್ನ ಬೇರುಗಳನ್ನು ಹರಿದುಕೊಂಡು ಎಲ್ಲಾದರೂ ಓಡಿಹೋಗಿಬಿಡಬೇಕೆಂದು ತಡಬಡಿಸಿದೆ. ಗಾಳಿಯ ಓಲಾಟಕ್ಕೆ ಹಾಗೇ ತೂರಿಬರುತ್ತಿದ್ದ ಕಿಡಿಗಳು ನನ್ನ ತುತ್ತತುದಿಯ ಸುಳಿಯವರೆಗೂ ತಮ್ಮ ಬಿಸಿಜ್ವಾಲೆಯನ್ನು ಎಟುಕಿಸಿ ಎಟುಕಿಸಿ ಸುಡಲು ಹವಣಿಸುತ್ತಿದ್ದವು. ಚಿಗುರುತ್ತಿದ್ದ ಎಳೆಎಳೆ ಎಲೆಗಳೂ ಬಣ್ಣ ಕಳೆದುಕೊಂಡು ಕರಕಲಾಗಿ ಹೋದವು. ಒಟ್ಟಾರೆ ನನ್ನ ಮೈಯನ್ನೆಲ್ಲ ಆ ಬೆಂಕಿಯೆಂಬ ರಾಕ್ಷಸ ನುಂಗಿ ನೀರು ಕುಡಿದು ಇನ್ನೇನೂ ಇಲ್ಲಿ ಉಳಿದಿಲ್ಲವೆಂಬಂತೆ, ಉಳಿದುಕೊಂಡಿದ್ದನ್ನು ನುಂಗಲು ಮುಂದೆ ಹೋದ. ನನ್ನ ಮೈಯ ಮೂಳೆಗಳನ್ನುಳಿದು ಉಳಿದೆಲ್ಲವನ್ನೂ ಸುಟ್ಟುಹಾಕಿದ ಅಪಾರ ಹಸಿವಿನ ಆ ದೈತ್ಯ ಎಷ್ಟು ಉಂಡರೂ ಸಾಕಾಗಲಿಲ್ಲವೆಂಬಂತೆ ಮುಂಬರಿದು ಇನ್ನಷ್ಟು ಮತ್ತಷ್ಟು ಆಪೋಶನ ಪಡೆಯಲು ಮುಂದೆಮುಂದೆ ಹೋಗುತ್ತಲೇ ಇದ್ದ...

ಯಾವಾಗ ಬಿಸಿಲ ಝಳ ಹಾಗೂ ಬೆಂಕಿಯ ಝಳ ಮರೆಯಾಗಿ ಸಣ್ಣ ಸಂಜೆ ಆವರಿಸಿತೋ ಆಗ ಸಮಾಧಾನದ ನಿಟ್ಟುಸಿರು ಬಿಟ್ಟು ಉರಿ ತಣ್ಣಗಾದ ನನ್ನ ಮೈಯನ್ನು ನೋಡಿಕೊಂಡೆ. ನಯವಾದ ಚರ್ಮದಂತಿದ್ದ ನನ್ನ ತೊಗಟೆಗಳು ಉರುಟುರುಟಾಗಿ, ಅಲ್ಲಲ್ಲಿ ಬಿರುಕು ಕಾಣಿಸಿಕೊಂಡು, ಇನ್ನೆಷ್ಟೋ ಕಡೆ ಸುಟ್ಟು ಕರಕಲಾಗಿ ಹೋಗಿತ್ತು. ಮೈದುಂಬಿಕೊಂಡಿದ್ದ ನನ್ನ ಇಡೀ ಆವರಣ ಬರಚಲು ಬರಚಲಾಗಿಬಿಟ್ಟಿತ್ತು. ಸುತ್ತ ಹಾಗೇ ಕಣ್ಣಾಡಿಸಿದೆ. ಇಡೀ ವಾತಾವರಣವೇ ತಾಂಡವ ನೃತ್ಯವಾಡಿ, ತನ್ನ ತಲೆಯ ಮೇಲೆ ತಾನೇ ಕೈಯಿಟ್ಟು ಸುಟ್ಟುಹೋದ ಭಸ್ಮಾಸುರನಂತೆ ಬಟಾಬಯಲಾಗಿ ಹೋಗಿತ್ತು. ಆದರೂ ತಣ್ಣಗೆ ಬೀಸುತ್ತಿದ್ದ ಸುಳಿಗಾಳಿ ಬಂದು ತಂಪನ್ನು ಮೈಗೆ ತಾಕಿಸಿ ಸಾಂತ್ವನ ಹೇಳುತ್ತಿರುವಂತೆ ಭಾಸವಾಗುತ್ತಿತ್ತು.

ಒಂದು ಹದ ಮಳೆಯಾದರೂ ಬಂದು, ಒಂದು ಸಣ್ಣ ಸ್ನಾನವನ್ನಾದರೂ ಮಾಡಿಸ ಬಾರದೇ ಎಂದು ಆಲಾಪಿಸುತ್ತಿದ್ದೆ. ಆದರೆ ಈ ಬೇಸಿಗೆ ಕಾಲದಲ್ಲಿ ಮಳೆಯಾದರೂ ಎಲ್ಲಿಂದ ಬರಬೇಕು ಎಂದುಕೊಂಡು ಕೂಡಲೇ ನೆನಪಾದವನಂತೆ ನದಿಯೊಳಕ್ಕೆ ಇಳಿದಿದ್ದ ನನ್ನ ಬೇರುಗಳಿಗೆ ದಂಡಿಯಾಗಿ ನೀರನ್ನು ಕಳುಹಿಸುವಂತೆ ಆಜ್ಞಾಪಿಸಿದೆ. ಅಲ್ಲಿಂದ ಹರಿದುಬಂದ ನೀರನ್ನು ಕುಡಿದು ಬಾಯಾರಿಕೆಯನ್ನು ತಣಿಸಿಕೊಂಡೆ. ದೇಹದ ಮೂಲೆಮೂಲೆಯ ನರನಾಡಿಗಳಿಗೆಲ್ಲ ಹರಿಸಿ ದಣಿವಾರಿಸಿಕೊಂಡೆ. ರಾಕ್ಷಸನ ಅವಸರದಲ್ಲಿ ತುಟ್ಟತುದಿಯಲ್ಲಿದ್ದ ಕುಡಿಗಳವರೆಗೂ ಬೆಂಕಿ ತಗುಲದೇ ಇನ್ನೂ ಸ್ವಲ್ಪ ಜೀವ ಉಳಿದುಕೊಂಡಿತ್ತು. ಅವುಗಳಿಗೆ ಇನ್ನಷ್ಟು ಪುಷ್ಟಿನೀಡಿ ಚಿಗುರಲು ಪ್ರಚೋದಿಸಿದೆ. ಅದರ ಪರಿಣಾಮ ಮುಂದಿನ ಎರಡು ಮೂರು ತಿಂಗಳಲ್ಲಿ ಮತ್ತೆ ಮೈತುಂಬಾ ಕೂದಲಂತೆ ಇನ್ನೊಂದಷ್ಟು ಎಲೆಗಳು ಮೂಡಿದವು.

ಈ ಅವಗಡದ ನಂತರ ನನಗೆ ಬೆಂಕಿಯೆಂದರೆ ಸಾಕು, ಮೈಯಲ್ಲೆಲ್ಲ ದೊಡ್ಡ ಛಳಕೊಂದು ಮೂಡಿ ನರನಾಡಿಗಳಲ್ಲೆಲ್ಲ ಉರಿ ಏಳುತ್ತದೆ. ಮೈಸುಟ್ಟುಕೊಂಡವರ ನೋವನ್ನು ಉಳಿದವರು ಹೇಗೆ ಬಲ್ಲರು? ಅದಕ್ಕೇ ಇರಬೇಕು, ಯಕ್ಷ, ಧರ್ಮರಾಯನಿಗೆ ಈ ಭೂಮಿ ಮೇಲಿನ ಮೂರು ಪ್ರಚಂಡ ಶಕ್ತಿಗಳಾವವು ಎಂದು ಕೇಳಿದಾಗ, ಬೆಂಕಿ, ನೀರು, ಗಾಳಿ ಎಂದಿರಬೇಕು. ನಿಜ. ಈ ಮೂರೂ ಹೇಗೆ ಜೀವದಾಯಿನಿಯೋ ಹಾಗೇ ಪ್ರಾಣಘಾತುಕವೂ ಹೌದು. ಆಗೆಲ್ಲ ಈ ಅಗ್ನಿಯ ಆರ್ಭಟವೇ ಇಷ್ಟಾದರೆ, ಇನ್ನು ತಂಪೆರೆವ ಈ ಗಾಳಿಯು ಎಂದಾದರೂ ಒಂದು ದಿನ ಬಿರುಗಾಳಿಯನ್ನೋ ಚಂಡಮಾರುತವನ್ನೋ ಎಬ್ಬಿಸಿ, ನನ್ನ ಮೈಯ ರೆಂಬೆಕೊಂಬೆಗಳನ್ನೆಲ್ಲ ಲಟಲಟನೇ ತಿರುಚಿ ಮುರಿದುಹಾಕಿ, ಬೇರಿಂದ ನನ್ನನ್ನು ಕಿತ್ತೊಗೆದು ಎಸೆದುಬಿಡಬಹುದೋ ಎಂಬ ಆತಂಕ ಆಗಾಗ ಎದುರಾಗುತ್ತಿತ್ತು. ಇನ್ನು ಈ ನದಿಯ ನೀರು? ಯಾವಾಗ ಧೋ ಎಂದು ರಪರಪನೆ ಸುರಿವ ಮಳೆ ತನ್ನೊಡನೆ ಹೊತ್ತು ತರುವ ಆಲಿಕಲ್ಲುಗಳನ್ನೆಲ್ಲ ದಪದಪನೆ ಸುರಿಸಿ ನನ್ನ ತಲೆ ಮೈಕೈಯ ಮೇಲೆಲ್ಲ ಜಡಿದು ಜರ್ಝರಿತನನ್ನಾಗಿ ಮಾಡಿಬಿಡುತ್ತದೋ, ಆ ಹರಿವ ನೀರೂ ಭೋರ್ಗರೆದು ಎಲ್ಲಿ ನನ್ನ ಬೇರಿಗೆ ಆಸರೆಯಾಗಿರುವ ಮಣ್ಣನ್ನೂ ಕೊಚ್ಚಿಕೊಂಡು ಹೋಗುತ್ತಾ ನನ್ನನ್ನೂ ತನ್ನೊಳಗೆ ಸೆಳೆದೊಯ್ದು ಎಲ್ಲಿಗೆ ಸೇರಿಸಿಬಿಡುತ್ತದೋ ಕಾಣೆ. ಈ ಒಂದು ಆಲೋಚನೆ ನನ್ನ ಭಾವಕೋಶದಲ್ಲಿ ಮೂಡುತ್ತಿದ್ದ ಹಾಗೆಯೇ ಇನ್ನೊಂದು ಕಡೆಯ ಬೇರುಗಳಿಗೂ ಸೂಚನೆ ನೀಡಿ ಇನ್ನಷ್ಟು ಮುಂದರಿದು ಆ ಕಡೆಯ ತಳಪಾಯವನ್ನೂ ಭದ್ರಪಡಿಸಲು ಸೂಚಿಸಿದೆ.

ಸುತ್ತಲೂ ಉಸಿರುಗಟ್ಟಿಸುವ ಹೊಗೆಯ ವಾಸನೆ. ಗಾಳಿಗೆ ಬೂದಿಯು ಹಾರುತ್ತ ಮೈತುಂಬ ಅಡರುತ್ತಿದ್ದರೆ ಎಂಥ ನಿರ್ವಾತ ಪ್ರದೇಶದಲ್ಲಿ ನಾನಿದ್ದೇನಲ್ಲ ಎಂದು ಭಯವಾಗುತ್ತಿತ್ತು. ಅವತ್ತಿಂದ ಗುಂಪುಗುಂಪಾಗಿ ಬಾಳುತ್ತಿದ್ದ ನಾನಿಂದು ಏಕಾಂಗಿ ಎಂದು ನನಗೇ ಅನ್ನಿಸಲಾರಂಭಿಸಿತು. ಅಂಥ ವೇಳೆ ತೂರಿಬಂದ ಒಂದು ಪರಿಮಳ ಜೀವಂತಿಕೆಯ ಸಿಂಚನವನ್ನು ಸಿಂಪಡಿಸಿದಂತಾಯಿತು. ಯಾವುದೋ ಮಲ್ಲಿಗೆಯೋ, ಸಂಪಿಗೆಯೋ, ಸುರಗಿಯೋ, ಇನ್ನಾವುದೋ ಸೌಗಂಧಿಕ ಪುಷ್ಪವೋ ಸುವಾಸನೆಯನ್ನು ಬೀರುತ್ತಲಿತ್ತು... ನನ್ನ ತುದಿಯಲ್ಲಿ ಅಳಿದುಳಿದಿದ್ದ ಎಲೆಗಳನ್ನು ಕನ್ನಡಿಯಂತೆ ಎಲ್ಲ ಕಡೆಗೆ ತಿರುಗಿಸಿ ಪ್ರತಿಫಲನವನ್ನು ಗ್ರಹಿಸಿದೆ. ಎಲ್ಲೂ ಅಲ್ಲ, ನಾನು ಬೇರೂರಿದ್ದ ನದಿಯ ನೀರಿಗೆ ತನ್ನ ಬೇರನ್ನೂ ಹರಿಬಿಟ್ಟಿದ್ದ ಜಾಲಾರ ಮರ ವಸಂತಕ್ಕೆ ತನ್ನ ಅಚ್ಚಬಿಳಿಯ ಹೂಗಳನ್ನು ಗೊಂಚಲು ಗೊಂಚಲಾಗಿ ತೂಗಿಬಿಟ್ಟಿತ್ತು. ಅದರ ಸುಗಂಧ ಗಾಳಿಯಲ್ಲೆಲ್ಲ ಪಸರಿಸಿ ಇಡೀ ಕಾಡಿಗೆ ಕಾಡೇ ಆ ವನಸುಮಕ್ಕೆ ಮಾರುಹೋಗಿತ್ತು. ನದಿಯ ಮಧ್ಯೆ ನಡುಗಡ್ಡೆಯಲ್ಲಿ ಪವಡಿಸಿದ್ದರಿಂದ, ಬೆಂಕಿಯ ಕೆನ್ನಾಲಿಗೆ ಅಲ್ಲೀವರೆಗೆ ಚಾಚಲು ಸಾಧ್ಯವಿಲ್ಲವಾಗಿದ್ದರಿಂದ ಬಚಾವಾಗಿ ನಳನಳಿಸುತ್ತ